**2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಕನಕಪುರ, ಬೆಂಗಳೂರು ದಕ್ಷಿಣ ಜಿಲ್ಲೆ.**
**S.C.5033/2024**

ದಿ:25.10.2025
CW-1 PW-1

| | |
|---|---|
| ಹೆಸರು | : ಅರುಣ್.ಬಿ.ಎಲ್. |
| ತಂದೆಯ ಹೆಸರು | : ಬಿ.ಎಂ.ಲಕ್ಕಣ್ಣ |
| ವಯಸ್ಸು | : 33 ವರ್ಷ |
| ಉದ್ಯೋಗ | : ಉಪ ವಲಯ ಅರಣ್ಯಾಧಿಕಾರಿಗಳು, ಚನ್ನಪಟ್ಟಣ ವಲಯ, |
| ವಾಸ | : ಚನ್ನಪಟ್ಟಣ |

**(ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು)**
**ಮುಖ್ಯವಿಚಾರಣೆ: ಮಾನ್ಯ ಸರ್ಕಾರಿ ಅಭಿಯೋಜಕರಿಂದ**

ನಾನು 2011 ರಿಂದ 2021ರವರೆಗೂ ಕನಕಪುರ ವಲಯದ ಹಾರೋಹಳ್ಳಿ ಶಾಖೆಯಲ್ಲಿ ಅರಣ್ಯ ರಕ್ಷಕನಾಗಿ ಹಾಗೂ 2017 ರಿಂದ 2019ರವರೆಗೂ ಪ್ರಭಾರ ಉಪವಲಯ ಅರಣ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ಕನಕಪುರ ಅರಣ್ಯ ವಲಯದ ಹಾರೋಹಳ್ಳಿ ಶಾಖೆಗೆ ಮರಳವಾಡಿ ಟೌನ್ ಬೀಟ್, ಹಾರೋಹಳ್ಳಿ ಟೌನ್ ಬೀಟ್ ನಮ್ಮ ಕಛೇರಿ ವ್ಯಾಪ್ತಿಗ ಬರುತ್ತವೆ.

ದಿ:13.10.2018ರಂದು ನಾನು ಹಾಗೂ ಚಾಸಾ-2ರವರು ಮರಳವಾಡಿ ಸರ್ಕಾರಿ ಬಸ್ ನಿಲ್ದಾಣದ ಬಳಿ ಗಸ್ತು ತಿರುಗುತ್ತಿರುವಾಗ, ಬೆಳಗ್ಗೆ 10-30 ಗಂಟೆ ಸಮಯದಲ್ಲಿ ಅನುಮಾನಸ್ಪದವಾಗಿ ಇಬ್ಬರು ಆಸಾಮಿಗಳು ಮರಳವಾಡಿ ಬಸ್ ನಿಲ್ದಾಣದ ಬಳಿ ಸ್ಕೂಲ್ ಬ್ಯಾಗ್ ಹಿಡಿದುಕೊಂಡು ನಿಂತಿದ್ದು, ನಂತರ ಅವರ ಚಲನವಲನಗಳನ್ನು ಪರಿಶೀಲಿಸಿ ಅನುಮಾನಗೊಂಡು ಆಸಾಮಿಗಳನ್ನು ವಿಚಾರಣೆಗೆ ಒಳಪಡಿಸಿದಾಗ ಅವರಿಂದ ಸಮಂಜಸವಾದ ಉತ್ತರ ಬರದೇ ಇದ್ದುದರಿಂದ ಅವರ ಬಳಿ ಇದ್ದ ಸ್ಕೂಲ್ ಬ್ಯಾಗ್‌ನ್ನು ತಪಾಸಣೆಗೆ ಒಳಪಡಿಸಿದಾಗ ಗಂಧದ ವಾಸನೆ ಭರಿತವಾದ ಮರದ ತುಂಡುಗಳನ್ನು ನೋಡಿ ಗಮನಿಸಿರುತ್ತೇನೆ. ನಂತರ ಅವರಿಗೆ ಗಂಧದ ಮರದ ತುಂಡುಗಳನ್ನು ಎಲ್ಲಿಂದ ಏಕೆ ತಂದಿದ್ದೀರಾ ಎಂದು ಪ್ರಶ್ನಿಸಿದಾಗ ಅವರುಗಳು ನಮ್ಮ ಊರಿನ ಬಳಿ ಇರುವ ಗುಡ್ಡದಲ್ಲಿದ್ದ ಗಂಧದ ಮರಗಳನ್ನು

ಕಡಿದು ತುಂಡುಗಳನ್ನಾಗಿ ಪರಿವರ್ತಿಸಿ ಮಾರಾಟ ಮಾಡಲು ತೆಗೆದುಕೊಂಡು ಬಂದಿರುವುದಾಗಿ ತಿಳಿಸಿರುತ್ತಾರೆ. ನಂತರ ಈ ಬಗ್ಗೆ ಯಾವುದೇ ಲೈಸೆನ್ಸ್ ಅನ್ನು ಪಡೆದಿರುವುದಿಲ್ಲವೆಂದು ತಿಳಿಸಿರುತ್ತಾರೆ. ನಂತರ ನಾನು ಹಾಗೂ ಚಾಸಾ-2ರವರು ಸದರಿ ಶ್ರೀಗಂಧದ ತುಂಡುಗಳನ್ನು ನಮ್ಮ ವಶಕ್ಕೆ ಪಡೆದು ತೂಕ ಮಾಡಿ ನೋಡಿದಾಗ ಮೂರುವರೆ ಕೆಜಿ ಇರುವುದು ಕಂಡುಬಂದಿರುತ್ತದೆ. ನಂತರ ಇಬ್ಬರು ಆಸಾಮಿಗಳನ್ನು ವಶಕ್ಕೆ ಪಡೆದು ವಿಚಾರ ಮಾಡಿದಾಗ ಅವರ ಹೆಸರು ಚಿಕ್ಕತಿಮ್ಮ ಮತ್ತು ರಾಮಕೃಷ್ಣ ಎಂದು ತಿಳಿಬಂದಿರುತ್ತದೆ. ನಂತರ ಸ್ಥಳದಲ್ಲಿದ್ದ ಸ್ಥಳೀಯರು ಪಂಚನಾಮೆ ಜರುಗಿಸಲು ಸಹಕರಿಸಲು ನಿರಾಕರಿಸಿದ್ದರಿಂದ ನಮ್ಮ ಸಿಬ್ಬಂದಿಗಳಾದ ಚಾಸಾ-3 ಮತ್ತು 4ರವರಿಗೆ ದೂರವಾಣಿ ಮೂಲಕ ಸ್ಥಳಕ್ಕೆ ಬರಲು ಸೂಚಿಸಿದ್ದು, ನಂತರ ಚಾಸಾ-3 ಮತ್ತು 4ರವರು ಸ್ಥಳಕ್ಕೆ ಬಂದ ಮೇರೆಗೆ ಅವರಿಗೆ ಈ ಪ್ರಕರಣದ ಬಗ್ಗೆ ಮಾಹಿತಿ ನೀಡಿ ಮಧ್ಯಾಹ್ನ 1-30 ರಿಂದ 2-00 ಗಂಟೆಯವರೆಗೆ ಪಂಚನಾಮೆ ಜರುಗಿಸಿ ಶ್ರೀಗಂಧದ ತುಂಡುಗಳನ್ನು ಹಾಗೂ ಆರೋಪಿತರನ್ನು ವಶಕ್ಕೆ ಪಡೆದುಕೊಂಡಿರುತ್ತೇನೆ. ನಿಪಿ-1ನ್ನು ಚಾಸಾ-2ರವರ ಸಹಾಯದಿಂದ ಬರೆಯಿಸಿರುತ್ತೇನೆ. ಸಾಕ್ಷಿಯು ದಿಃ13.10.2018ರ ಪಂಚನಾಮೆ ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-1, 1(ಎ) ಎಂದು ಗುರುತಿಸಲಾಯಿತು. ನಂತರ ವಶಕ್ಕೆ ಪಡೆದ ಆಸಾಮಿಗಳನ್ನು ವಲಯ ಅರಣ್ಯಾಧಿಕಾರಿಗಳ ಕಛೇರಿಗೆ ಕರೆದುಕೊಂಡು ಬಂದು ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಸಾಕ್ಷಿಯು ಸದರಿ ಪ್ರಥಮ ವರ್ತಮಾನ ವರದಿ ಹಾಗೂ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-2, 2(ಎ) ಎಂದು ಗುರುತಿಸಲಾಯಿತು. ನಂತರ ಅಮಾನತುಪಡಿಸಿಕೊಂಡ ಶ್ರೀಗಂಧದ ತುಂಡುಗಳನ್ನು ಹಾಗೂ ಸ್ಕೂಲ್ ಬ್ಯಾಗ್‌ನ್ನು ಕರ್ನಾಟಕ ಅರಣ್ಯ ನಿಯಮ 67(3)ರಂತೆ ಕ್ರಮವಹಿಸಿರುತ್ತೇನೆ. ಸಾಕ್ಷಿಯು ಸದರಿ ದಾಖಲೆ ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-3, 3(ಎ) ಎಂದು

ಗುರುತಿಸಲಾಯಿತು. ಈ ಹಂತದಲ್ಲಿ ಅರಣ್ಯ ಇಲಾಖೆಯವರು ತಮ್ಮ ವಶದಲ್ಲಿದ್ದ ಶ್ರೀಗಂಧದ ತುಂಡುಗಳು ಹಾಗೂ ಶಾಲಾ ಬ್ಯಾಗ್‌ನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದು, ಸಾಕ್ಷಿಯು ನ್ಯಾಯಾಲಯದ ಮುಂದಿರುವ 04 ಶ್ರೀಗಂಧದ ತುಂಡುಗಳು, 07 ಶ್ರೀಗಂಧದ ಮರದ ಚಕ್ಕೆಗಳು ಎಂದು ಹೇಳಲಾದ ಮುದ್ದೆ ಮಾಲುಗಳನ್ನು ನೋಡಿ ಗುರುತಿಸಿದ್ದು ಅದನ್ನು ಒಟ್ಟಾಗಿ ಎಂಒ-1 ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಸ್ಕೂಲ್ ಬ್ಯಾಗ್‌ನ್ ನೋಡಿ ಗುರುತಿಸಿದ್ದು ಅದನ್ನು ಎಂಒ-2 ಎಂದು ಗುರುತಿಸಲಾಯಿತು. ಎಂಒ-1ಮತ್ತು 2ನ್ನು ಪುನಃ ಅರಣ್ಯ ಇಲಾಖೆಯವರ ವಶಕ್ಕೆ ನೀಡಲಾಗಿರುತ್ತದೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ 2ನೇ ಆರೋಪಿಯನ್ನು ನೋಡಿ ಗುರುತಿಸಿದ್ದು, 1ನೇ ಆರೋಪಿಯು ಈ ದಿನ ತನ್ನ ವೈಯಕ್ತಿಕ ಹಾಜರಾತಿಯಿಂದ ವಿನಾಯ್ತಿ ಪಡೆದಿದ್ದು, 1ನೇ ಆರೋಪಿ ಪರ ವಕೀಲರು 1ನೇ ಅರೋಪಿಯ ಗುರುತಿಸುವಿಕೆಯ ಬಗ್ಗೆ ತಕರಾರು ಇರುವುದಿಲ್ಲ ಎಂದು ತಿಳಿಸಿದ್ದರಿಂದ, 1ನೇ ಆರೋಪಿಯ ಗುರುತಿಸುವಿಕೆಯ ಬಗ್ಗೆ ತಕರಾರು ಇರುವುದಿಲ್ಲವೆಂದು ಪರಿಗಣಿಸಲಾಗಿರುತ್ತದೆ. ನಂತರ ತನಿಖಾ ಕಡತವನ್ನು ಚಾಸಾ-5ರವರಿಗೆ ಮುಂದಿನ ತನಿಖೆಗಾಗಿ ವಹಿಸಿಕೊಂಡಿರುತ್ತೇನೆ.

**<u>ಪಾಟೀ ಸವಾಲುಃ ಶ್ರೀ ಎಬಿಎಸ್, 1 ಮತ್ತು 2ನೇ ಆರೋಪಿತರ ಪರ ವಕೀಲರಿಂದ</u>**

ಎಂಒ-1ನ್ನು ವಶಪಡಿಸಿಕೊಂಡಿದ್ದು ಎಂದು ಹೇಳಲಾದ ಮರದ ತುಂಡುಗಳನ್ನು ಎಲ್ಲಿ ಕಟಾವು ಮಾಡಿ ಹಾಗೂ ತುಂಡುಗಳನ್ನಾಗಿ ಪರಿವರ್ತಿಸಿದ ಸ್ಥಳ ಮತ್ತು ಮರದ ಬುಡದ ಸ್ಥಳದ ಪಂಚನಾಮೆಯನ್ನು ಜರುಗಿಸಿರುವುದಿಲ್ಲ ಎಂದರೆ ಸರಿ. ಎಂಒ-1 ಶ್ರೀಗಂಧದ ಮರದ ತುಂಡುಗಳು ಎಂದು ನಿರೂಪಿಸಲು ತಜ್ಞರಿಂದ ಮಾಹಿತಿಯನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿ. ಮರಳವಾಡಿ ಸರ್ಕಾರಿ ಬಸ್ ನಿಲ್ದಾಣದ ಆವರಣದಲ್ಲಿ ಸಿಸಿ ಕ್ಯಾಮೆರಾವನ್ನು ಅಳವಡಿಸಿರುವುದನ್ನು ನಾನು ನೋಡಿ ಗಮನಿಸಿರುವುದಿಲ್ಲ. ಮರಳವಾಡಿ ಸರ್ಕಾರಿ ಬಸ್ ನಿಲ್ದಾಣದ ಟಿಸಿ ರವರನ್ನು ಭೇಟಿ ಮಾಡಿ ಪಂಚನಾಮೆಯನ್ನು ಜರುಗಿಸಲು ಸಹಕರಿಸುವಂತೆ ಕೇಳಿಕೊಂಡಿರುವುದಿಲ್ಲ. ನಿಪಿ-1ರಲ್ಲಿ

ಪಂಚನಾಮೆಯನ್ನು ಜರುಗಿಸಿದ ಸಮಯವನ್ನು ನಮೂದು ಮಾಡಿರುವುದಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿಯು ಕಾರ್ಯ ಒತ್ತಡದಿಂದ ಬರೆದಿರುವುದಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ನಿಪಿ-2ರಲ್ಲಿ ಪ್ರ.ವ.ವರದಿಯನ್ನು ದಾಖಲಿಸಿದ ಸಮಯವನ್ನು ನಮೂದು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-3ನ್ನು ತಯಾರುಪಡಿಸಿದ ಅವಧಿಯನ್ನು ನಮೂದು ಮಾಡಿರುವುದಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿಯು ಮಹಜರ್ ಜರುಗಿಸುವ ಕಾಲದಲ್ಲಿ ನಿಪಿ-3ನ್ನು ಬರೆದಿರುತ್ತೇನೆಂದು ಸಾಕ್ಷಿ ನುಡಿಯುತ್ತಾರೆ. ಮರಳವಾಡಿ ಗ್ರಾಮದ ಸುತ್ತಮುತ್ತಲಿನ ಗುಡ್ಡದಲ್ಲಿ ಶ್ರೀಗಂಧದ ಮರಗಳು ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ವಶಕ್ಕೆ ಪಡೆದ ಆರೋಪಿಗಳ ಪೈಕಿ ಎಂಒ-2ನ್ನು ಯಾರು ಹಿಡಿದುಕೊಂಡಿದ್ದರು ಎಂದು ಹೇಳಲು ಈಗ ಆಗುವುದಿಲ್ಲ. ಪಂಚನಾಮೆಗೆ ಸ್ಥಳೀಯರು ಸಹಕರಿಸಲು ನಿರಾಕರಿಸಿದ್ದರ ಬಗ್ಗೆ ನಿಪಿ-1ರಲ್ಲಿ ಒಕ್ಕಣಿಕೆ ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-3ರಲ್ಲಿ ಶ್ರೀಗಂಧದ ತುಂಡುಗಳು ಹಾಗೂ ಚೂರುಗಳ ಬಗ್ಗೆ ನಮೂದು ಮಾಡಿರುವುದಿಲ್ಲ ಎಂದರೆ ಸರಿ. ಎಂಒ-1ನ್ನು ಸ್ಥಳೀಯ ಅಂಗಡಿಯಲ್ಲಿ ತೂಕ ಮಾಡಿಸಿರುತ್ತೇನೆ. ಈ ಬಗ್ಗೆ ನಿಪಿ-1ರಲ್ಲಿ ಅಂಗಡಿಯ ಹೆಸರನ್ನು ನಮೂದು ಮಾಡಿರುವುದಿಲ್ಲ ಎಂದರೆ ಸರಿ. ಎಂಒ-1ರಲ್ಲಿ ಕಂಡುಬರುವ 04 ತುಂಡುಗಳು ಹಾಗೂ 07 ಚಕ್ಕೆಗಳ ತೂಕ ಹಾಗೂ ಉದ್ದಳತೆಗಳನ್ನು ನಿಪಿ-1ರಲ್ಲಿ ನಮೂದು ಮಾಡಿರುವುದಿಲ್ಲ ಎಂದರೆ ಸರಿ. ನಾನು ಆರೋಪಿತರನ್ನು ವಶಕ್ಕೆ ಪಡೆದು ದಸ್ತಗಿರಿ ಕ್ರಮ ಅನುಸರಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-1ರಲ್ಲಿ ಸುಳ್ಳು ಚೆಕ್ಕು ಬಂಧಿಯನ್ನು ನಮೂದು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರನ್ನು ಮರಳವಾಡಿ ಸರ್ಕಾರಿ ಬಸ್ ನಿಲ್ದಾಣದ ಬಳಿ ಎಂಒ-1 ಮತ್ತು 2ರೊಂದಿಗೆ ವಶಕ್ಕೆ ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ಈ ಕೇಸಿಗೂ ಹಾಗೂ ಆರೋಪಿತರಿಗೂ ಯಾವುದೇ ಸಂಬಂಧ ಇರುವುದಿಲ್ಲಎಂದರೆ ಸರಿಯಲ್ಲ. ಎಂಒ-1ಮತ್ತು 2ನ್ನು ಈ ಕೇಸಿಗೋಸ್ಕರ ಸೃಷ್ಟಿಸಲಾಗಿರುತ್ತದೆ ಎಂದರೆ ಸರಿಯಲ್ಲ. ನಾನು ಆರೋಪಿತರ ವಿರುದ್ಧ ಯಾವುದೇ ಪ್ರಕರಣವನ್ನು ದಾಖಲಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-1 ರಿಂದ 3ನ್ನು ಈ ಕೇಸಿಗೋಸ್ಕರ ಸೃಷ್ಟಿಸಲಾಗಿರುತ್ತದೆ ಎಂದರೆ ಸರಿಯಲ್ಲ.

**ಮರುವಿಚಾರಣೆ - ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ. ಎಂದು ಸಾಕ್ಷಿ ಒಪ್ಪಿರುತ್ತಾರೆ.

**(ಕುಮಾರ್.ಹೆಚ್.ಎನ್)**
2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕನಕಪುರ, ಬೆಂಗಳೂರು ದಕ್ಷಿಣ ಜಿಲ್ಲೆ.